ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಿತು.

ಅಧ್ಯಕ್ಷರು: ನಮ್ಮ ಕಡೆಯ ಪೂರ್ವಿಕರು ಹೇಳುತ್ತಿದ್ದರು: ಕೆಜಿಎಫ್‌ನಲ್ಲೇ ಬಂಗಾರ ಸಿಗಲು ಕಾರಣವೇನು ಎನ್ನುವುದಕ್ಕೆ, ಅವರೊಂದು ಕತೆ ಹೇಳುತ್ತಿದ್ದರು: ಸೀತಾದೇವಿ ಬಂಗಾರದ ಜಿಂಕೆಯನ್ನು ಆಶೆಪಟ್ಟಾಗ ಆ ಜಿಂಕೆ ಕೆಜಿಎಫ್‌ನ ಸುಮಾರು ಹತ್ತು ಕಿಮೀ ಸುತ್ತಮುತ್ತ ಓಡಾಡಿತ್ತು ಅದಕ್ಕೋಸ್ಕರ ಅಲ್ಲಿ ಬಂಗಾರ ಸಿಕ್ಕುತ್ತಿದೆ ಅಂತ ಹೇಳುತ್ತಿದ್ದರು. ಇರಲಿ. ನಾನು ಈಗ ದಿನಾಂಕ 15-3-2000ರಿಂದ 4-5-2000ವರೆಗೆ ನಡೆದ ಸದನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಸಭೆಯ ಅವಗಾಹನೆಗಾಗಿ ಮುಂದಿಡುತ್ತಿದ್ದೇನೆ.

5. ಸದನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹನ್ನೊಂದನೇ ವಿಧಾನಸಭೆಯ ಎರಡನೆಯ ಅಧಿವೇಶನವು ದಿನಾಂಕ 15.03.2000ದಿಂದ 31.03.2000 ದವರೆಗೆ ಮತ್ತು ದಿನಾಂಕ 10.04.2000ದಿಂದ 04.05.2000ದವರೆಗೆ ಸಮಾವೇಶಗೊಂಡು ಒಟ್ಟು 28 ದಿನಗಳಲ್ಲಿ ಒಟ್ಟು 148 ಗಂಟೆಗಳ ಕಾಲ ಕಾರ್ಯಕಲಾಪಗಳನ್ನು ನಡೆಸಿ ಸಭೆಯನ್ನು ನಡೆಸಿರುತ್ತದೆ.

ಅಧಿವೇಶನದ ಪ್ರಾರಂಭದ ದಿನ ದಿನಾಂಕ 15.03.2000ದಂದು ಕರ್ನಾಟಕದ ಸನ್ಮಾನ್ಯ ರಾಜ್ಯಪಾಲರು ಜಂಟಿ ಸದನವನ್ನು ಉದ್ದೇಶಿಸಿ, ಭಾಷಣ ಮಾಡಿರುತ್ತಾರೆ. ರಾಜ್ಯಪಾಲರ ಭಾಷಣದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆಯು 8 ದಿವಸಗಳ ಕಾಲ ನಡೆದಿದ್ದು, 52 ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿರುತ್ತಾರೆ. ಚರ್ಚೆಯು ಸುಮಾರು 19 ಗಂಟೆ 20 ನಿಮಿಷಗಳ ಕಾಲ ನಡೆದು, ಸನ್ಮಾನ್ಯ ಮುಖ್ಯ ಮಂತ್ರಿಗಳು ದಿನಾಂಕ 25.04.2000ದಂದು ಉತ್ತರ ನೀಡುವ ಮೂಲಕ ವಂದನಾರ್ಪಣಾ ನಿರ್ಣಯವನ್ನು ಸದನವು ಅಂಗೀಕರಿಸಿದೆ.

ದಿನಾಂಕ 27.03.2000ದಂದು ಸನ್ಮಾನ್ಯ ಮುಖ್ಯಮಂತ್ರಿಗಳು, 2000-2001ನೇ ಸಾಲಿನ ಆಯವ್ಯಯವನ್ನು ಮಂಡಿಸಿದರು. ಆಯವ್ಯಯ ಮೇಲಿನ ಸಾಮಾನ್ಯ ಚರ್ಚೆಯಲ್ಲಿ 18 ಜನ ಸದಸ್ಯರು ಭಾಗವಹಿಸಿರುತ್ತಾರೆ. ಮುಖ್ಯಮಂತ್ರಿಗಳು ದಿನಾಂಕ 30ನೇ ಮಾರ್ಚ್ 2000ದಂದು ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆಗೆ ಉತ್ತರ ನೀಡುವ ಮೂಲಕ ಆಯವ್ಯಯ ಅಂದಾಜುಗಳನ್ನು ನಾಲ್ಕು ತಿಂಗಳ ಅವಧಿಗೆ ಲೇಖಾನುದಾನವನ್ನು ಮಂಡಿಸಲಾಯಿತು. ಅದಕ್ಕೆ ಸದನವು ಅನುಮೋದನೆ ನೀಡಿತು.

ಈ ಅವಧಿಯಲ್ಲಿ ಇತ್ತೀಚೆಗೆ ನಿಧನರಾದ ಭಾರತದ ಮಾಜಿ ರಾಷ್ಟ್ರಪತಿಗಳಾದ ಡಾ॥ ಶಂಕರ್ ದಯಾಳ್ ಶರ್ಮಾ, ವಿಧಾನಸಭಾ ಸದಸ್ಯರಾದ ಶ್ರೀ ಅಸ್ಕೋಟಿಕರ್ ವಸಂತ್ ಕಮಾಲಕರ್, ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಕೆ. ಮಲ್ಲಣ್ಣ. ಕೇರಳ ರಾಜ್ಯದ ಮಾಜಿ ರಾಜ್ಯಪಾಲರಾದ ಶ್ರೀ ಬಿ. ರಾಚಯ್ಯ, ವಿಧಾನಸಭೆಯ ಮಾಜಿ ಸದಸ್ಯರುಗಳಾದ ಶ್ರೀ ಜಿ.ಎನ್. ಪಾಟೀಲ್, ಶ್ರೀ ಎಸ್.ಸಿ. ವಿರೂಪಾಕ್ಷಯ್ಯ, ಶ್ರೀ ಹೆಚ್.ಬಿ. ಕಾಡಸಿದ್ದಪ್ಪ, ಶ್ರೀ ಬಾಲಕೃಷ್ಣರಂಗರಾವ್, ಶ್ರೀ ಸಿ.ಎ. ಚಂದ್ರೇಗೌಡ, ಶ್ರೀ ಬಿ. ಗಂಗಣ್ಣ, ಶ್ರೀ ಜಿ.ಕೆ. ಸುಬ್ಬಯ್ಯ, ಶ್ರೀ ಟಿ.ಹೆಚ್. ಹನುಮಂತರಾಯಪ್ಪ, ಶ್ರೀ ಸಿ. ರುದ್ರಪ್ಪ, ಶ್ರೀ ಕೆ.ಎಸ್. ಮಲ್ಲಿಕಾರ್ಜುನ, ಶ್ರೀ ಹೆಚ್.ಬಿ. ಷಹಾ, ಮಾಜಿ ಭೂ ಸೇನೆಯ ಮುಖ್ಯಸ್ಥ ಜನರಲ್ ಶ್ರೀ ಪಿ.ವಿ.ಕುಮಾರ ಮಂಗಳಂ, ಹಾಗೂ ಸಾಹಿತಿ ಶ್ರೀ ಪಿ. ಲಂಕೇಶ್ ಅವರುಗಳ ನಿಧನದ ಗೌರವಾರ್ಥ ಸಂತಾಪ ನಿರ್ಣಯಗಳನ್ನು ಮಂಡಿಸಿ, ಅಂಗೀಕರಿಸಲಾಗಿದೆ.

ಈ ಅಧಿವೇಶನ ಅವಧಿಯಲ್ಲಿ ದಿನಾಂಕ 21ನೇ ಮಾರ್ಚ್, 2000ದಂದು ನಾಮನಿರ್ದೇಶಿತ ಸದಸ್ಯರಾದ ಶ್ರೀ ರೋಜರ್ ಮೈಕಲ್ ಬಿನ್ನಿಯವರು ಪ್ರಮಾಣವಚನ ಸ್ವೀಕರಿಸಿದರು.

ಎರಡನೆಯ ಅಧಿವೇಶನದ ಅವಧಿಯಲ್ಲಿ 3238 ಪ್ರಶ್ನೆಗಳನ್ನು ಮಾನ್ಯ ಸದಸ್ಯರುಗಳಿಂದ ಸ್ವೀಕರಿಸಲಾಗಿದ್ದು, ಆ ಪೈಕಿ 360 ಚುಕ್ಕೆ ಗುರುತಿನ ಪೈಕಿ 303 ಪ್ರಶ್ನೆಗಳಿಗೆ ಹಾಗೂ 2724 ಚುಕ್ಕೆ ರಹಿತ ಪ್ರಶ್ನೆಗಳಿಗೆ ಪೈಕಿ 2098 ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಲಾಗಿದೆ.

ನಿಯಮ 60ರಮೇರೆಗೆ 21 ನಿಲುವಳಿ ಸೂಚನೆಗಳನ್ನು ಸ್ವೀಕರಿಸಿದ್ದು, ಮಾನ್ಯ ಸದಸ್ಯರುಗಳಿಗೆ ಪ್ರಾರಂಭಿಕವಾಗಿ ಪ್ರಸ್ತಾಪಿಸಲು ಅವಕಾಶ ನೀಡಿ, ನಿಲುವಳಿ ಸೂಚನೆಗಳಿಗೆ ಒಪ್ಪಿಗೆಯನ್ನು ನಿರಾಕರಿಸಲಾಯಿತು. ಒಟ್ಟು 194 ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಗಿರುತ್ತದೆ.

ಒಟ್ಟು 14 ಗಮನ ಸೆಳೆಯು ಸೂಚನೆಗಳು ಚರ್ಚೆಯಾಗಿರುತ್ತದೆ. ನಿಮಯ 351ರಡಿಯಲ್ಲಿ 64 ಸೂಚನೆಗಳಿಗೆ ಉತ್ತರಗಳನ್ನು ನೀಡಲಾಗಿದೆ. ನಿಯಮ 69ರಡಿಯಲ್ಲಿ 12 ಸೂಚನೆಗಳನ್ನು ಸ್ವೀಕರಿಸಿದ್ದು ನಾಲ್ಕು ಸೂಚನೆಗಳಿಗೆ ಚರ್ಚಿಸಲು ಅವಕಾಶ ನೀಡಲಾಗಿದೆ. 2 ಸೂಚನೆಗಳಿಗೆ ಅರ್ಧಗಂಟೆ ಕಾಲಾವಧಿ ಚರ್ಚೆಗೆ, ಅವಕಾಶ ನೀಡಲಾಯಿತು.

50 ವಿಷಯಗಳನ್ನು ಶೂನ್ಯ ವೇಳೆಯಲ್ಲಿ ಚರ್ಚಿಸಲು ಅವಕಾಶ ಮಾಡಿಕೊಟ್ಟು ಉತ್ತರ ಒದಗಿಸಲಾಗಿದೆ

ಸದರಿ ಅವಧಿಯಲ್ಲಿ ಮೂರು ಹಕ್ಕುಚ್ಯುತಿ ಸೂಚನೆಗಳನ್ನು ಸ್ವೀಕರಿಸಿದ್ದು, ಒಪ್ಪಿಗೆಯನ್ನು ತಡೆಹಿಡಿಯಲಾಗಿದೆ.

ಈ ಅವಧಿಯಲ್ಲಿ ವಿಧಾನಪರಿಷತ್ತಿನ ವಿಧೇಯಕಗಳು ಸೇರಿದಂತೆ ಒಟ್ಟು 18 ವಿಧೇಯಕಗಳನ್ನು ಪರ್ಯಾಲೋಚಿಸಿ ಅಂಗೀಕರಿಸಲಾಗಿದೆ.

1 ಶಾಸನಾತ್ಮಕ ನಿರ್ಣಯವನ್ನು ಸದನದಲ್ಲಿ ಮಂಡಿಸಲು ಅವಕಾಶ ನೀಡಿ, ಅಂಗೀಕರಿಸಲಾಗಿದೆ.

ಈ ಅವಧಿಯಲ್ಲಿ ಪೂರಕ ಅಂದಾಜನ್ನು ಮಂಡಿಸಿ ಅಂಗೀಕರಿಸಲಾಗಿರುತ್ತದೆ. ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಮಯ 369ರ ನಿಮಯ 3ರಡಿಯಲ್ಲಿ ವಿಧಾನ ಮಂಡಲದ ವಿವಿಧ ಸಮಿತಿಗಳ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ ತಿದ್ದುಪಡಿಗಳನ್ನು ದಿನಾಂಕ 17-4-2000ದಂದು ಅಂಗೀಕರಿಸಲಾಯಿತು.

ಅನುದಾನ ಬೇಡಿಕೆಗಳ ಮೇಲೆ 4 ದಿನಗಳ ಕಾಲ ಚರ್ಚೆ ನಡೆಸಿ, ಸರ್ಕಾರದಿಂದ ಉತ್ತರ ನೀಡಲಾಗಿರುತ್ತದೆ.

ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ಸುಲಲಿತವಾಗಿ ಸದನ ನಡೆಸಲು ನನ್ನೊಡನೆ ಸಹಕರಿಸಿದ ಸಭಾ ನಾಯಕರಾದ ಮಾನ್ಯ ಮಂತ್ರಿಗಳಿಗೂ, ಸಚಿವ ಸಂಪುಟದ ಸದಸ್ಯರುಗಳಿಗೂ, ವಿರೋಧಪಕ್ಷದ ನಾಯಕರಿಗೂ, ವಿವಿಧ ಪಕ್ಷಗಳ ನಾಯಕರುಗಳಿಗೂ, ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೂ, ಪತ್ರಕರ್ತರಿಗೂ, ಆಕಾಶವಾಣಿ ಮತ್ತು ದೂರದರ್ಶನದ ಮಾಧ್ಯಮಗಳಿಗೂ, ವಿವಿಧ ಇಲಾಖಾ ಅಧಿಕಾರಿಗಳಿಗೂ ಹಾಗೂ ವಿಧಾನ ಸಭೆ ಸಚಿವಾಲಯದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಸದನವನ್ನು ಈಗ ಅನಿರ್ಧಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ .)